## 2 ನೇ ಅಪರ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
## ಮದ್ದೂರು

**ಸಿ.ಸಿ. 1227/2017**

ಫಿರ್ಯಾಧಿ:- ಮದ್ದೂರು ಪೊಲೀಸ್ ಠಾಣೆ

-ವಿರುದ್ಧ-

ಆರೋಪಿತರು

1. ಸಿದ್ದರಾಜು ಬಿನ್ ಗುರುಸಿದ್ದಶೆಟ್ಟಿ, 40 ವರ್ಷ, ಹೊನ್ನೂರು ಗ್ರಾಮ , ಯಳಂದೂರು ತಾಃ , ಚಾಮರಾಜನಗರ ಜಿಲ್ಲೆ
2. ನಾಗಭೂಷಣಾರಾಧ್ಯ ಬಿನ್ ಲೇಟ್ ಮಲ್ಲಾರಾಧ್ಯ, 36 ವರ್ಷ, ಹಳೇ ಹಂಪಾಪುರ ಗ್ರಾಮ , ಕೊಳ್ಳೇಗಾಲ ತಾಃ , ಚಾಮರಾಜನಗರ ಜಿಲ್ಲೆ
3. ನಂಜುಂಡ ಆರಾಧ್ಯ ಬಿನ್ ಲೇಟ್ ಮಲ್ಲಾರಾಧ್ಯ , 38 ವರ್ಷ, ಸರಗೂರು ಗ್ರಾಮ , ಕೊಳ್ಳೇಗಾಲ ತಾಃ, ಚಾಮರಾಜನಗರ ಜಿಲ್ಲೆ
4. ಮಹದೇವ ಬಿನ್ ದೇವರಸು , 25 ವರ್ಷ, ಸರಗೂರು ಗ್ರಾಮ , ಕೊಳ್ಳೇಗಾಲ ತಾಃ, ಚಾಮರಾಜನಗರ ಜಿಲ್ಲೆ

**ಃ ದೋಷಾರೋಪಣೆಃ-**

ಶ್ರೀ. **ಆದಿತ್ಯ ಆರ್. ಕಲಾಲ್** , ಬಿ.ಎ., ಎಲ್.ಎಲ್.ಬಿ., 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಃ.ದಂ.ಗಳು, ಮದ್ದೂರು ಆದ ನಾನು ಈ ಕೆಳಕಂಡ ನಿಮ್ಮನ್ನು ದೋಷಾರೋಪಣೆಗೆ ಒಳಪಡಿಸುತ್ತಿರುವುದೇನೆಂದರೆಃ-

ದಿನಾಂಕ 11-4-2015 ರಂದು ಮದ್ದೂರು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಗೆಜ್ಜಲಗೆರೆ ಕೆ.ಎಂ.ಎಫ್. ಹತ್ತಿರಕ್ಕೆ ಬನ್ನಿ ನಾವು 12 ವರೆ ಲಕ್ಷ ತರುತ್ತೇವೆ ನೀವು 5 ಲಕ್ಷ ಮಾತ್ರ ತೆಗೆದುಕೊಂಡು ಬನ್ನಿ ಎಂದು ಆರೋಪಿತರಾದ ನೀವು (ಹಣದ ಉದ್ದೇಶದಿಂದ) ಚಾಸಾ.2 ರವರಿಗೆ ಫೋನ್ ಮಾಡಿದ್ದು, 1 ನೇ ಆರೋಪಿಯಾದ ನೀನು ನಿಗಧಿಪಡಿಸಿದಂತೆ 2 ರಿಂದ 4 ನೇ ಆರೋಪಿತರಾದ ನೀವು ಕೆಎ-10-ಎಸ್-4296 ಸಂಖ್ಯೆಯ ಮೋಟಾರು ಸೈಕಲ್‌ನಲ್ಲಿ ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ಸದರಿ ಸ್ಥಳಕ್ಕೆ ಬಂದಾಗ, ಚಾಸಾ.2 ರವರ ಮಾಹಿತಿಯಂತೆ ಆರೋಪಿತರಾದ ನಿಮಗಾಗಿ ಕಾಯುತ್ತಿದ್ದ ಚಾಸಾ.1, 3 ರಿಂದ 6 ರವರು ಆರೋಪಿತರಾದ ನಿಮ್ಮನ್ನು ಸುತ್ತುವರಿದು ವಶಕ್ಕೆ ಪಡೆದು ನೀವು ತಂದಿದ್ದ ಕಾಲೇಜ್ ಬ್ಯಾಗನ್ನು ತೆಗೆದು ನೋಡಲಾಗಿ , ಕಾಲೇಜ್ ಬ್ಯಾಗ್ ತುಂಬಾ ಹಳೇ ನ್ಯೂಸ್ ಪೇಪರ್ಗಳನ್ನು ಕಟ್ ಮಾಡಿ ನೋಟುಗಳಂತೆ ಕಾಣುವ ಹಾಗೆ ಬಂಡಲ್ ಮಾಡಿ ತುಂಬಿ, ಕಾಗದಗಳ ಮೇಲೆ ಒಂದು ಖಾಕಿ ರಾಪರನ್ನು ಹಾಕಿ ಅದರ ಮೇಲೆ ಮೂರು ಬಂಡಲ್ಗಳ ಮೇಲೆ ಒಂದೊಂದು ನೋಟುಗಳನ್ನು ಅಂದರೆ ಒಂದು ಸಾವಿರ ರೂಪಾಯಿ ಒಂದು ನೋಟು , 500 ರೂಪಾಯಿ ಒಂದು ನೋಟು , ನೂರು ರೂಪಾಯಿ ಒಂದು ನೋಟುಗಳನ್ನು ಅಂಟಿಸಿ ಬ್ಯಾಗ್‌ನೊಳಗಡೆ ಹಣದ ನೋಟುಗಳೆ ತುಂಬಿರುತ್ತವೆಂದು ನಂಬಿಸಲು ಒಳಗೆಲ್ಲಾ ಹಳೇ ನ್ಯೂಸ್ ಪೇಪರ್ ಬಂಡಲ್

(signature) 20/2

ತುಂಬಿದ್ದು, ಮಾಹಿತಿದಾರರಿಗೆ ಮೋಸ ಮಾಡಿ ಹಣ ಲಪಟಾಯಿಸುವ ಉದ್ದೇಶದಿಂದ ಹಾಗೂ ಸುಲಭದ ದಾರಿಯಲ್ಲಿ ಹಣವನ್ನು ಸಂಪಾದನೆ ಮಾಡುವ ಉದ್ದೇಶದಿಂದ ಆರೋಪಿತರಾದ ನೀವು ಈ ಕೃತ್ಯವನ್ನೆಸಗಿ ಚಾಸಾ.2 ರವರಿಗೆ ಮೋಸ ಮಾಡಿದ್ದರಿಂದ ಭಾ.ದಂ.ಸಂ ಕಲಂ 420ರಡಿ r/w 34 ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ ಎನ್ನುವುದಾಗಿದೆ?

[signature] 20/2

(ಶ್ರೀ ಆದಿತ್ಯ ಆರ್. ಕಲಾಲ್ )

ದಿನಾಂಕ : 20-2-2020 2ನೇ ಅಪರ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.ಮದ್ದೂರು.

A1 [signature]

A2 [signature]

A3 [signature]

A4 [signature]